"ರಸಿಕ"

★

ಕುರಾವರ್ಶಿಗಾಗಿ

೧೯೫೮

...ಡುಷ ಪ್ರಕಟನಾಲಯ,
ಕಿನ್ನಿಗೋಳಿ, ದ. ಕ.

ಎಂಟನೆಯ ಎಸಕ

ಅವಳ ನೆನಪು

(ನೀಳ್ಗಬ್ಬ)

★

" ರಸಿಕೆ "

★

೧೯೫೮

ಯುಗಪುರುಷ ಪ್ರಕಟನಾಲಯ,
ಕಿನ್ನಿಗೋಳಿ, ದ. ಕ.

ಸಂಪಾದಕರು:

ಕೊ. ಅ. ಉಡುಪ.   ಅ. ಗೌ. ಕಿನ್ನಿಗೋಳಿ.

ಬೆಲೆ: ಎಂಟು ಆಣೆ
ಅಥವಾ
೫೦ ನಯೆ ಪೈಸೆ.

ಪ್ರಕಾಶಕರು:
ಕೊಡತ್ತೂರು ಅನಂತಪದ್ಮನಾಭ ಉಡುಪ,
ಯುಗಪುರುಷ ಪ್ರಕಟನಾಲಯ,
ಕಿನ್ನಿಗೋಳಿ, ದ. ಕ.

ಮುದ್ರಕರು:
ರಿ ಎಂಡ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಮಂಗಳೂರು.

—ಕುರಿತು

'ಅವಳ ನೆನಪು'—ಈ ಕವಿತಾಮಾಲೆಯಲ್ಲಿ ಸುಂದರವಾಗಿ ಪೋಣಿಸಲ್ಪಟ್ಟ ಭಾವಕುಸುಮಗಳ ಪರಿಮಳವನ್ನು ಸವಿವ ಮೊದಲು, ವಾಚಕರನ್ನು ಒಂದು ಕ್ಷಣ ತಡೆವಿಡಿದು ಈ ಮಾತುಗಳೆಡೆಗೆ ಆಹ್ವಾನಿಸಲು ಸಂದರ್ಭವಿದೇಕೋ ನನಗೆ ಆನಂದವನ್ನುಂಟುಮಾಡುತ್ತಿದೆ. ಆದುದರಿಂದಲೆ ವಾಚಕರ ಮುಂದೆ ಈ ಕೆಲವು ಮಾತುಗಳು ....

ಅತಿಶೀಘ್ರಗತಿಯಿಂದ ಬದಲಾವಣೆಯನ್ನೈದುತ್ತಿರುವ ದಿನಗಳಿವಾಗಿವೆ. ಕೇವಲ ರಾಜಕೀಯ ಕ್ಷೇತ್ರ ಹಾಗೂ ವಿಶಿಷ್ಟ ರೀತಿಯಲ್ಲಿ ನಾವೀನ್ಯವನ್ನು ಹೊಸೆಯುವ ವಿಜ್ಞಾನಗತಿ—ಇವೇ ಮೊದಲಾದವುಗಳಲ್ಲೆಂದು ಮಾತ್ರವಲ್ಲ,-ಸಾಹಿತ್ಯ ಮಾರ್ಗದಲ್ಲಿಯೂ ನೂತನೋನ್ಮೇಷಭರಿತವಾದ ಬದಲಾವಣೆಯೊಂದು ತದಾಶ್ರಿತ ವಿವಿಧ ಶಾಖೆಗಳಲ್ಲಿ ತಲೆದೋರಿದೆಯೆಂಬುದು ಇಂದಿನ ನಾಗರಿಕರ ಮುಂದೆ ಈದಂತತಯಾ ನಿರೂಪಿಸುವ ಹೊಸ ವಿಚಾರವಲ್ಲ. ಪ್ರಕೃತ ಕವಿತೆಗಳ ಕುರಿತು ಒಂದೆರಡು ಮಾತುಗಳನ್ನಿಲ್ಲಿ ಹೇಳುವಾಸೆಯಿದೆ; ಯಾಕೆಂದರೆ ಅದು ಸಂದರ್ಭೋಪಾತ್ತವಿದೆ!

ಇಂದಿನ ಕವಿತಾ ಮಾರ್ಗದಲ್ಲಿ 'ನವ್ಯ'ವೆಂಬೊಂದು ಪಂಥವು ತಲೆಗಾಣಿಸಿದೆ. ಪ್ರಾಚೀನರು ಅಳವಡಿಸಿಕೊಂಡಿದ್ದ ಛಂದೋನಿಯಮ, ಶಾಸ್ತ್ರಾನುಗತವಾದ ಇನ್ನಿತರ ಸಂಪ್ರದಾಯ—ಇವನ್ನುಳಿದು ಕಲ್ಪನೆಯ ಹೃದಯದಲ್ಲರಳಿನಿಂತು—ಭಾವನೆಯ ಗುಡಿಯನ್ನೆತ್ತಿ ತೋರಿ, ಹೃದಯದೊಡನೆ ಜೀವನ ಸೌಂದರ್ಯವನ್ನು ಸಾಧಿಸುವ ಬಗೆಯಲ್ಲಿ ಓದಿಗನುವಾಗುವ—ಭಾವಗತಿಗನುವಾಗುವಂತೆ ರುಚಿರ ಪದವಿನ್ಯಾಸವೆಸಗುವ-ಸಂಪ್ರದಾಯವು ನವ್ಯತೆಯ ನಿಲುವಿನಲ್ಲಿ ಬಂದಿದೆಯೆನ್ನಬಹುದು. ಮಾರ್ಗವಿದು ಆದರಣೀಯವಾಗಿದೆಯೆಂಬುದನ್ನು 'ಬದಲಾವಣೆ'ಯ ಮರ್ಮವನ್ನರಿತ ಪ್ರತಿಯೊಬ್ಬನೂ ಒಪ್ಪಿಕೊಳ್ಳಲೇಬೇಕು—ಆದರೆ ಪ್ರಾಚೀನ ಗತಿಯನ್ನು ತೆಗಳಿ, 'ಪ್ರಗತಿಶೀಲ-ಸಂಪ್ರದಾಯ'ಗಳ ಪಾರಸ್ಪರಿಕವಾದ ಎರಕವನ್ನರಿಯದೆ, ಸಿಕ್ಕ ದಾರಿಯಲ್ಲಿ ಸಾಗಿ, ಇತರರಿಗೆ ಅರ್ಥವಾಗದಂತಹ ಭಾವನೆಯನ್ನು (?) ಪದ್ಯಗಳಲ್ಲಿ ತುಂಬಿ, ಜೀವನ ಸಹಾನುಭಾವಿಯಲ್ಲದ ವಸ್ತುವನ್ನು ಕಾವ್ಯವಸ್ತುವನ್ನಾಗಿರಿಸಿಕೊಂಡು ಸಾಗುವ ದೂಷ್ಯಸಂಪ್ರದಾಯವನ್ನು, ಸರ್ವಾತ್ಮನಾ ಖಂಡಿಸುವುದು ವಾಚಕ ಧರ್ಮದಿಂದ ದೂರ ಸರಿದಿರದ ಮಾತಾಗಿದೆ. 'ನವ್ಯ'ತೆಯು ಹೃದಯದಲ್ಲಿ ಚೈತನ್ಯವನ್ನು ತುಂಬಿ, ವಿಶಾಲತೆಯೆಡೆಗೆ ಸಾಗಿಸುವಂತಾದರೆ ಧಾರಾಳವಾಯಿತು. ಉಳಿದೆಡೆಗಳಲ್ಲಿ ಕಾಲಧರ್ಮದಂತೆ ಉದಾತ್ತ ಪರಿವರ್ತನೆಗಳು ಬರಲಿ! ಅದಕ್ಕೆ ಸದಾ ಸ್ವಾಗತವಿದೆ!

'ಶ್ರೀ ರಸಿಕ' ಪ್ರತಿಗೆ—ಇವರು ಸೌಹಾರ್ದಪೂರ್ಣವಾದ ಆತ್ಮೀಯತೆಂ
ಎರಕದಲ್ಲಿ 'ಅವಳ ನೆನಪು' ಕವಿತಾಮಾಲೆಯ ಕುರಿತು ನಾಲ್ಕು ಮಾತುಗಳನ
ಬರೆಯಲು ಹೇಳಿದ್ದಾರೆ. ಅವರು ತೋರಿದ ವಿಶ್ವಾಸಕ್ಕಾಗಿ ಆನಂದಿಸುತ್ತೇನೆ.

'ಅವಳ ನೆನಪು' ಕಾವ್ಯವಿದು ಒಂದು ಮಧುರವಾದ ಶೃಂಗಾರವಲ್ಲರಿ
ಸ್ಮೃತಿ, ವಿರಹ, ಶೃಂಗಾರ-ಗಳಿಂದ ಒಪ್ಪವೇರಿನಿಂತ ಒಂದು ಮಧುರವಾ
ಭಾವವಲ್ಲರೀ.

ನವ್ಯತೆಯ ತಂಗಾಳಿಯು ಈ ಖಂಡ ಕಾವ್ಯದಲ್ಲಿ ಬೀಸಿ ನಿಂತಿದೆ. ಛಂ
ಶ್ಶಾಸ್ತ್ರಾನುಮತವಾದ ಗತಿಪರ್ಯಾವು ಇಲ್ಲಿಲ್ಲದಿದ್ದರೂ ತಡೆಯಿಲ್ಲದೆ ಸಾಗು
ಒಂದು ಬಗೆಯ 'ದಾಟಿ' ಇಲ್ಲಿದೆ; ಮಾತ್ರವಲ್ಲ ತಿಳಿಯಾದ—ರಸಾನುಗುಣವಾದ
ಅರ್ಥಪೂರ್ಣವಾದ ಪದಗಳ ಜೋಡಣೆ ಇಲ್ಲಿ ತಲೆಗಾಣಿಸಿದೆ. ಶೃಂಗಾರ ರಸ
ಸುಂದರವಾದ ನಿಲುವನ್ನು ತ್ರಿವಿಧಭಾವಸಂಮಿಶ್ರಿತವಾದ ಈ ಕಾವ್ಯದ
ಧಾರಾಳವಾಗಿ ನಿಟ್ಟಿಸಬಹುದಾಗಿದೆ. ವಸ್ತುವು ಸಾಮಾನ್ಯವಿದ್ದರೂ—ಹೊಸ
ರೀತಿಯಲ್ಲಿ-ನಿರೂಪಣೆಯ ವಿಧಾನದಲ್ಲಿ ಮಾತ್ರ ವಸ್ತುವಿಗೊಂದು ಆಕರ್ಷ
ಯಿದೆ. ವಸ್ತುವಿಗೂ ಪ್ರಾಧಾನ್ಯತೆಯಿರುತ್ತಿದ್ದರೆ ಕಾವ್ಯವಿದು ಇನ್ನಷ್ಟು ಸುಂದ
ವಾಗುತ್ತಿತ್ತೆಂಬಲ್ಲಿ ಸಂಶಯವಿಲ್ಲ.

ಪ್ರಿಯೆಯ-ಸ್ಮರಣೆಯಲ್ಲಿ ವಿರಹಿಯಾಗಿ, ವಿಕ್ಷಿಪ್ತ ಹೃದಯಿಯಾಗಿ, ಕಾತ
ನಾಗಿ, ಪ್ರೇಮಯಜ್ಞದ ಹೋತ್ರಿಯಾಗಿ, ಶೃಂಗಾರಿಯಾಗಿ-ದುಃಖಿಯಾಗಿ, ಅಳು
ನರಮನೆಯಲ್ಲಿ ಏಕಾಕಿಯಾಗಿ ಕುಳಿತು, ಗತಕಾಲವನ್ನು ನಿಟ್ಟಿಸುವಲ್ಲಿಂದ ಗೀ
ಗಳಿವು ಮೃದುವಾಗಿ ಸಂಚಾರವೆಸಗುತ್ತಾ ವಿವಿಧ ಭಾವಗಳಲ್ಲಿ ತೇಲಾಡುವವು
ಪ್ರಿಯೆಯ ಕುರಿತಾಗಿರುವ ಪ್ರೇಮ, ಆಕೆಯಿರುವ ನೀಚವಾದ ನೆಲೆ—ಇ
ಕ್ಕಾಗಿ ಕಣ್ಣೀರ ಸೋನೆ ಸುರಿಸಿ, ತನ್ನೆದೆಯ ಒಲವನ್ನು ತುಂಬಿ ಹಿಡಿವಾಗಲೂ
ಅದು ಬರಿದಾಗಿ ಬಂದ ಗಳಿಗೆಯನ್ನು ನೆನೆದು ಮರುಗಿ ಸ್ತ್ರೀಲೋಕವನ್ನೇ ಒಂದು
ವಿಶಿಷ್ಟವಾದ ಮಾರ್ಮಿಕ ವೀಕ್ಷಣದಲ್ಲಿ ನಿಟ್ಟಿಸಿ, ಪ್ರೇಮಿಜನ ಚಿತ್ತವೃತ್ತಿಯನ್ನು
ವಿವಿಧ ಭಂಗಿಗಳಲ್ಲಿ ಉಲ್ಲೇಖಿಸಿದ ಒಂದು ಬಗೆಯ ಸಾಹಜಿಕ ಜೀವನೇತಿವೃತ್ತ
ಪ್ರಸ್ತುತ ಕಾವ್ಯವಾಹಿನಿಯಲ್ಲಿ—ಅಲ್ಲಲ್ಲಿ ತಲೆದೋರುವ ಭಾವಾವರ್ತಗಳೊಡನೆ
ತೇಲಿ ಸಾಗುತ್ತಿದೆ!! ಮಧುರವೀ ಶೃಂಗಾರ ಕುಸುಮ!

ಮಾತಿನ ಪೋಣಿಕೆ—

ಸ್ಮೃತಿಯ ಮುಂದೆ ನಿಂತ—

ಮನಭಾವ ತನುಜೀವ ಸರ್ವಸ್ವ ನಿನಗಿತ್ತು
ಏನಾದರೂ ಮಾಡು ಎಂದು ಕುಳಿತಿರಲು
ನಾಯ ಬಾಯಿಗೆ ಕೊಟ್ಟ ಬಟ್ಟೆಯಂತವುಗಳನು
ನೀನು ನಿರ್ದಯಿಯಾಗಿ ಕಿತ್ತೊಗೆದೆ ಹರಿದು |

ಆದರೂ ನಾನವನು ಹೊಸೆದು ಕೌದಿಯ ಮಾಡಿ
ಕಣ್ಣೀರ ಲೇಪದಿಂ ಸಂದುಗೂಡಿಸಿದೆ
ಲೇಪಸರಿದಾಗೊಮ್ಮೆ ಹರಕು ಬಿರಕುಗಳಿಂದ
ಹಿಂದಿನಾ ನೆನಪುಗಳು ಒಳ ಹರಿವವು ॥ —ಎಂಬ ಮಾತು

ಸಂದರ್ಭಕ್ಕೆ ಹೊಂದಿ ನಿಂತು—ಮುಂದಿನ ಸ್ಮೃತ್ಯಾಯತ್ತ ವಿರಹ-ಜುಗುಪ್ಸೆಗಳಿಗೆ ಅಡಿಗಲ್ಲಾಗಿದೆಯೆಂದು ಹೇಳದಿರಲು ಸಾಧ್ಯವಿಲ್ಲ. ಇನ್ನೊಂದೆಡೆ "ಶೂನ್ಯದಾಳದಿ ಅಡಗೆ ಒಮ್ಮೊಮ್ಮೆ ಸುಳಿಗಾಳಿ ನಿನ್ನ ನೆನಪನು ತಂದು ಅಳಿಸುತಿಹುದು" ಎಂದಾಡಿದ ಮಾತು ಹೃದಯ—ಪ್ರೇಮಗಳ ಚಿಂತನೆಯೆಸಗುವ ಮುಂದಿನ ಭಾಗಕ್ಕೆ ಪುಟವೀಯುತ್ತಿದೆ. ಮುಂದೆ ಕಾಣಬರುವ ಪ್ರಿಯೆಯ ವಿವಿಧ ಭಾವಗಳನ್ನು ರೂಪಿಸುವ ಪದ್ಯಗಳು ಮೃದುಮಧುರವಾದ ಶೃಂಗಾರ ರಸದ ವಿಕಸಿತಕುಸುಮಗಳೆಂದು ಹೇಳಬಹುದಾಗಿದೆ; ಇಲ್ಲಿ ಕಾಣುವ ವರ್ಣನೆಗಳೂ ತುಂಬೆರಕದಲ್ಲಿವೆ!

ಕೊನೆಯದಾಗಿ—ಪ್ರೇಯಸಿಯ ನೆನಹಿನಲ್ಲಿ ಆಡಿದ
"ವಿರಹದಾಹವೆ ಅಗ್ನಿ ಕಣ್ಣೀರೆ ರಸ ಘೃತವು
ಬಡ ಜೀವ ಮುಖ್ಯ ಹೋತ್ರೀ,
ಮೂಲಮಂತ್ರವು ಪ್ರೇಮ ನಿಟ್ಟುಸಿರು ಛಂದಸ್ಸು
ಋಷಿಯಿದಕೆ ಯಾರೋ ಕಾಣೆ" —ಎಂದಾಡಿದ 'ರಸಿಕ'ರ ಮಾತಿನ ಮರ್ಮವನ್ನೂ—ಅದು ಸಂದರ್ಭಕ್ಕೆ ಹೊಂದಿನಿಂತ ಬಗೆಯನ್ನೂ-ಮನವಾರೆ ಶ್ಲಾಘಿಸಿ—'ರಸಿಕ'ರೇ ಕೊನೆಯಲ್ಲಾಡಿದ 'ಭಾವದರಮನೆಗೊಂದು ರನ್ನಗಲಶವನಿಡುವ ಸಿಂಗಾರಿ ಮುಗುದೆಯವಳೆಲ್ಲಿರುವಳೋ' —ಎಂಬ ನೆನಹಿನಲ್ಲಡಕವಾದ ಕಾತರತೆಯ ಒಳಸಂಚಾರದ ಮಂಗಲದ ದನಿಯನ್ನು ಉಲ್ಲೇಖಿಸಿ-ರಸಿಕರ ಮುಂದೆ 'ರಸಿಕ'ರು ನೀಡಿದ ಈ ಶೃಂಗಾರ ವಲ್ಲರಿಯನ್ನು ನಾನೂ ಸ್ವಾಗತಿಸುವೆನು. ಭಾಷಾ-ಭಾವ ಮಾಧುರ್ಯ, ವರ್ಣನೆ, ಔಪಮ್ಯಗಳ ರುಚಿರತೆ ವ್ಯಂಗ್ಯಾರ್ಥದ ಹಿರಿತನ ಇವುಗಳಿಂದ ಒಪ್ಪವೇರಿ ನಿಂತ 'ಅವಳ ನೆನಪು' ಚೆಲುವಾಗಿದೆಯೆಂದೆಂದು ಈ ನಾಲ್ಕು ಮಾತುಗಳನ್ನಿಲ್ಲಿಗೆ ಮುಗಿಸಿಕೊಳ್ಳುತ್ತೇನೆ.

ಶರ್ಮ್—

ವಾಣೀಮಂದಿರಮ್,
ಕಾಸರಗೋಡು,
(ದ. ಭಾ.)

ಕೆ. ಎಸ್. ಶರ್ಮಾ,
ವಿದ್ವಾನ್, ವಿಶಾರದ.

ಅವಳ ನೆನಪು

— ೧ —

ಜೀವನದ ಸಂಕ್ರಾಂತಸಮಯದರೆಗಳಿಗೆಯನು
ಕುಳಿತೊಮ್ಮೆ ಮೆದುವಾಗಿ ಮೆಲುಕಾಡಲು
ಮನದಾಳದಲ್ಲುಳಿದ ಹಳೆಯ ನೆನಪುಗಳೆಲ್ಲ
ಕದಡಿ ಕಾಳಜಿಯಾಗಿ ಮುಂಬರುವವು ॥

ದಿವ್ಯ ಮಿಲನದ ಚಿಹ್ನ ಉರಿದ ಕೆಂಡದ ಬೂದಿ
ಕೆರೆಯೊಣಗಿ ಉದುರಿರುವ ಕಿಂಜಲ್ಕ ಜಾಲ
ಸಿಹಿನೆನಪುಗಳ ಗೋರಿ ನೆರೆಯಿಳಿದ ಹಾಳೂರು
ಈ ಎನ್ನ ನೆನಪುಗಳ ಮುರುಕು ಗೋಲ.

ಅಳುವಿನರಮನೆಯಲ್ಲಿ ಏಕಾಕಿ ನಾ ಕುಳಿತು
ಯಾರಿಗೂ ತಿಳಿಯದಂತೆ
ಮೊರೆದು ಘರ್ಜಿಸುತಿರುವ ವೇದನೆಯ ತಾಳದೆಲೆ
ಕಣ್ಣೀರ ಸೋನೆಸುರಿವೆ.

ಈಗಿರುವ ವೇದನೆಯ ಶಿಖರದಿಂ ಕೆಳನೋಡೆ
ಅಲ್ಲಿ ಉಳಿವಿರುವವರು ಒದ್ದಾಡಲು.
ಅಯ್ಯೋ ಬರಲಿಲ್ಲವಲೆ ಋಣವಿಲ್ಲ ಪಾಪಿಗಳು!
ಎಂದು ಮನಮರುಗುವುದು ಚಿಂತಿಸುವುದು.

* * * * *

ಓ ಎನ್ನ ನಿರ್ಭಾಗ್ಯೆ! ಯಾಕಾಗಿ ಅಳುತಿರುವೆ?
ನೀನು ಗರ್ತದ ಕೊಳಚೆಯಲ್ಲಿರುವೆಯೆಂದೆ?
ಅಂದು ನಾ ಕೈನೀಡಿ ಗೋಗರೆದು ಕರೆದಾಗ
ಬಲುಮೋಸ ಮರುಳೆಂದು ನೂಕಿರುವೆ ನೀ.

ನನ್ನ ಈ ಶಿಖರದಲಿ ತ್ರಿವಿಧ ಮಲಯಾನಿಲಂ
ರಾತ್ರಿಯುಗಲಕೆ ಹರಿವ ಹಾಲ್ಬೆಳಕಿನಮೃತಂ!
ನೀನಿರುವ ಗರ್ತದಲಿ ದುರ್ಗಂಧ ಉರಿದಾಹ
ನಿಶಿಯೆಲ್ಲ ಕಾರ್ಮೋಡ ಕವಿದ ಕತ್ತಲ ಬಲ್ಲೆ.

ನೀಪಡುವ ಅವಧಿಯಲಿ ಕರುಣೆ ನಿಜಕೂ ಬೇಕು
"ಕರುಣೆಯಿಲ್ಲದೆ ಕಷ್ಟ ಸಹನೆಯುಸದಳವು".
"ಋಣ ಎಲ್ಲ ಹಣೆಬರಹ" ಎಂದು ನಾ ಹೇಳಿದರು
ತರ್ಕ ಸತ್ಯವೆ ನೋಡು ಮನನಮಾಡು

ಮನ, ಭಾವ, ತನು, ಜೀವ, ಸರ್ವಸ್ವ ನಿನಗಿತ್ತು
"ಏನಾದರೂ ಮಾಡು" ಎಂದು ಕುಳಿತಿರಲು,
ನಾಯ ಬಾಯಿಗೆ ಕೊಟ್ಟ ಬಟ್ಟೆಯಂತವುಗಳನು
ನೀನು ನಿರ್ದಯಿಯಾಗಿ ಕಿತ್ತೊಗೆದೆ ಹರಿದು.

ಆದರೂ ನಾನವನು ಹೊಸೆದು ಕೌದಿಯ ಮಾಡಿ
ಕಣ್ಣೀರಲೇಪದಿಂ ಸಂದುಗೂಡಿಸಿದೆ.
ಲೇಪಸರಿದಾಗೊಮ್ಮೆ ಹರಕು ಬಿರುಕುಗಳಿಂದ
ಹಿಂದಿನಾ ನೆನಪುಗಳು ಒಳಹರಿವವು.

* * * * *

ಅಲ್ಲ ಎನ್ನದೆ ಹೆಣ್ಣೆ! ಒಮ್ಮೆ ಯೋಚಿಸಿ ನೋಡು
ಅಮಿತ ಪರಮಾನಂದ ಪಡೆದ ನಿಮಿಷವನು.
ಆ ನಿನ್ನ ಪರಿರಂಭ ಸಿಹಿಯಮೃತ ಕೊಡ ತುಂಬ
ವದನ ಕೂಟದ ಸುಖಾಸ್ವಾದನವೆ ಸಗ್ಗ...

ಬಾಹುಲತೆಯಿಂದೆನ್ನ ಬಿಗಿದಪ್ಪಿ ಮುದ್ದಾಡಿ
ಚೆಂಗುಲಾಬಿಯ ಹಾಗೆ ಮುಗುಳು ನಗುತ
ಬಲಗೆನ್ನೆಯನು ಗಲ್ಲದಡಿಗೆ ಸೋಂಕಿಸಿ ನಿಂತು
ಪ್ರೀಯ ರಾಜಾ ಎಂದು ತೆಕ್ಕೆ ಬಿದ್ದು...

ಕೆದರು ಕೂದಲ ಸವರಿ ಶರಟು ಗುಂಡಿಯ ಹಾಕಿ
'ಆಯಾಸವೇ' ಎಂದು ಮೆಲ್ಲ ಕೈ ಆಡಿಸಿ
"ನಾನು ನಿಮ್ಮಯ ದೇಹ ನೀವು ನನ್ನಯ ಜೀವ
ನಾನು ನೀವೂ ಒಂದೇ"–ಎಂದೆನ್ನೆಯಾ–
ಚಿನ್ನ ನೀ ಮರೆತೆಯಾ?

ಸಣ್ಣಗಿನ ಇನಿಮಾತು, ಸಣ್ಣನಡು ಚಿಗರಿನಡೆ
ಕುಡಿನೋಟ ತುಂಟ ನಗು ಆ ನಿನ್ನ ಬೆಡಗು,
ಕಲ್ಲೆದೆಯ ಚಿಗುರೊಡೆಸಿ, ರಸಗಂಗೆಯುಂ ಹರಿಸಿ
ಭಾವ ಕುಸುಮಗಳನ್ನು ಅರಳಿಸಿತ್ತು–
–ನೆನಪು ಬವಳಿ ತಂದಿಹುದು.

ಹಸುರೆಲೆಯ ಹೂ ಬಳ್ಳಿ ಕೆಂಪಗಿನ ಹೂವರಳಿ
ಅದರ ಮೇಲ್ ಕರಿ ಹಳದಿ ಚಿಟ್ಟೆಯಂತೆ
ನಿನ್ನ ಪ್ರೇಮದ ಸ್ವಾತಿ ಹನಿಯುದುರಿ ಭಾವನೆಯ
ಕಮಲ ಮೂಲವನೊಮ್ಮೆ ಕೆಣಕಿ ಹೋಯ್ತು–
ಕುಸುಮವರಳಿ ಬಂತು.

ನೀರಿನಲಿ ನಾ ಧುಮುಕಿ ನೀರಾಳವಂ ಪೊಗುತ
ನೀರಜದ ನೆಲೆಯನ್ನು ಕಾಣಬಯಸಿದೆನು,
ಬಯಕೆ ಬಯಲಾಗುತ್ತ ಬಾಳು ಬೋರಲು ಬಿತ್ತು
ಬಾಯಿಬಾರದು ಹೇಳ ಮನಮರುಗುತಿಹುದು–
ಭಾವ ಕುದುರುತಿಹುದು.

ಬರಿದೆ ಚಿಂತಿಸಿಯೇನು ನೀರ ಹೋಮದ ಹಾಗೆ
ನಡುಗಾಡಿನಲಿ ನಿಂತು ಕರೆದ ಹಾಗೆ.
ನನ್ನದೇ ದನಿಯೆನಗೆ ಮರುಕಳಿಸಿ ಬರುತಿಹುದು
"ಓ ಎನ್ನ ನಿರ್ಭಾಗ್ಯ ಯಾಕಾಗಿ ಅಳುವೆ–
ಬರಿದೆ ಮರುಳನಂತೆ"

ಭಾವ ಮೋಹಾವೇಶವೆಲ್ಲವಡಗುತ ಬಂತು
ಈಗ ಬರಿ ನಿರ್ವೇದ ಶೂನ್ಯ-ಶೂನ್ಯ!
ಶೂನ್ಯದಾಳವಿ ಅಡಗೆ ಒಮ್ಮೊಮ್ಮೆ ಸುಳಿಗಾಳಿ
ನಿನ್ನ ನೆನಪನು ತಂದು ಅಳಿಸುತಿಹುದು-
-ಮನಸು ಮರುಗುತಿಹುದು.

*　*　*　*　*

ಓ ಮನವೆ ನೀನೇಕೆ ಹೆಣ್ಣನೇ ನಂಬುವೆಯೊ?
ನಂಬಿ ವಂಚಿತನಾಗಿ ಯಾಕಳುವೆಯೊ?
ಪರಹೆಣ್ಣು ನಿನ್ನವಳೆ ಕೈ ಹಿಡಿದ ಮಡದಿಯೆ?
ಅಬಲೆಯುಲ್ಲೊ ನಿನ್ನ ಅಧಿಕಾರವೇ?-
-ಅಯ್ಯೋ ಬರಿ ಮರುಳು ನೀ.

ಹೃದಯವೆನ್ನುವ ವಸ್ತು ಎಲುಬು ಮಾಂಸದ ಗೂಡೆ?
ಅಲ್ಲ ಅದರೊಳಗೊಂದು ಆತ್ಮವಿಹುದೆ?
'ಪ್ರೇಮ'ವೆಂದರೆ ಬರಿಯ ಕಾಮತೃಷೆ ತೀರಿಪುದೆ?
ಅಲ್ಲ ಸಿಗರೇಟಿನಂತೆಳೆದು ಬಿಸುಡುವುದೆ?

ಓಡಿದರೆ ಕಾಡುವಳು ಕಾಡಿದರೆ ಓಡುವಳು
ಈ ಹೆಣ್ಣು ಬಕಮಾರಿ ಬೇಡ-ನೇಹವೇ ಬೇಡ!
ಪ್ರೇಮವೆನ್ನುತ ಹಾಡಿ ದೇಹದಾಸೆಯ ಮುಗಿಸಿ
'ಚಟ' ತೀರೆ ಎದ್ದೋಡೆ ಪ್ರೇಮವೆನ್ನುವರೆ?

ಮನಬಂದ ಕಡೆ ತಿರುಗಿ ಥಳಕುಮಿಣುಕನು ತೋರಿ
ಹಲವಾರು ಯುವಮನವ ಹಾಳು ಮಾಡಿ
ಹಣಕಾಗಿ ಹಲ್ಕಿರಿದು ಮೋಹಜಾಲವ ಬೀಸಿ
'ಮುಗ್ಧ' ಹೃದಯಗಳನ್ನು ಹುರಿದು ಹಾಕಿ.

ಹುಡುಕಾಟಕೆಯ ಪ್ರೇಮ ನೇಹಗಳ ತೋರಿಸುತ
ಹಲವರಿಗೆ ಹೊಳೆ ಹೊಂಡ ಹಾದಿ ತೋರಿ
ಕೊನೆಗೊಮ್ಮೆ ಸೋತಾಗ, ತನ್ನ ಬಲೆಯಲಿ ತಾನೆ
ತನಗರಿಯದೆಲೆ ಸಿಲುಕಿ ಸೂರೆಯಾಗಿ

"ಹಾ ನಾನು ಹಾಳಾದೆ, ಹಾಳು ಪುರುಷರ ಗುಂಪು
ಹದಮಾಡಿತೆನ್ನುವನು ಹರಿಯುದಲಿ"–
ಎಂದು ಹಳಿಯುವ ಹೆಣ್ಣು– ಇವಳನ್ನು ನಂಬುವೆಯೊ?
ನಂಬಿ ಕೆಟ್ಟಾಗೊಮ್ಮೆ ನನ್ನ ನೆನೆಸದಿರು!

*　　*　　*　　*　　*

ಕುಡಿನೋಟ ಕಂಡಾಗ ಕಾಮಿನಿಯು ಕರೆದಾಗ
ಕೇಳದಿರುವವನಾರು ಈ ಜಗದಲಿ–
–ಕಾಣೆ ಮೂಜಗದಲಿ!
ಜವ್ವನದ ತೆಕ್ಕೆಯಲಿ ಮನವು ಮುನಿಯಾಗುವುದೆ?
ಜವನ ಅತಿಥಿಯು ಕೂಡ ಬಾಯ್ಬಿಡುವನು–
–ಹೆಣ್ಣು ಎಂದಾಗಲೆ!

ರಮ್ಯ ಜೀವನವೊಂದು ಕನಸಾಗಿ ಕಣ್ಮುಂದೆ
ಕುಣಿಕುಣಿದು ಕರೆಯುತಿದೆ ಒಲವಿನೆಡೆಗೆನ್ನ
ನೆನಪುಗಳ ಬಲೆಯಲ್ಲಿ ಸಿಲುಕಿ ಚಡಪಡಿಸುತ್ತ
ದಾರಿ ಕಾಣದೆ ಬನ್ನಪಡುತಿರುವೆನು.

ಓ ಭಾವಸಾಗರಳೆ ಬಾ ಬಳಿಗೆ ಸಿಗ್ಗೇಕೆ
ಮೊರೆದಳಲಿ ಬಾಯಾರಿ ಬಾಯ್ಬಿಡುವೆನು
ಮಧುರ ಸಾಗರಳಾಗಿ ನೀನುಕ್ಕುತಿರುವಾಗ
ಅಧರ ಒಣಗಿದ ನಾನು ಕರೆದಿರುವೆನು.

ಅವಳ ನೆನಪು

ಇದು ನಿನ್ನನಣಕಿಸುವ ಪರಿಯಲ್ಲ ನಿನ್ನಾಣೆ
ನೀನಿಲ್ಲವೇ ಎನುತ ಪಡುವ ಪರಿತಾಪ.
ಈ ಒಂಟಿ ಜಡದೇಹ ಪಡುವ ಸುಖವೂ ಸುಖವೆ
ನೀನಿಲ್ಲದಿಳೆಯೆನಗೆ ಬರಿಯ ನೀರಸವು.

ಬೇಡಾದ ಬಾಳಿನಲಿ ನಿನಗಾಗಿ ಕೊರ ಕೊರಗಿ
ನಿರ್ವಿಣ್ಣನಾದವನು; ಪರಿಕಿಸುವೆಯಾ?
ಅನ್ಯನಲ್ಲವು ನಾನು ನಿನ್ನವನೆ ಆಗಿರುವೆ
ಅನ್ಯೋನ್ಯವಾಗಿರುವ ಬಾ ಬಯಸುವೆ-
-ಬಾರ ಬಾ ಕರೆಯುವೆ.

ಪ್ರೇಮದಾಗರ ನೀನು ಆನಂದಭರಿತಳಿಹೆ
ಇದನರಿತು ಬಾಳಿದವರೆಷ್ಟು ಜನ ಹೇಳು
ಆನಂದ ಸಾಗರಳೆ ಆಳವರಿಯೆನು ನಿನ್ನ
ಆದರೂ ನಿನಗಾಗಿ ಆಲೋಕಿಪೆ-
-ದೂರ ದಿಕ್ತಟದಲಿ

ಅಧರ ಕಮಲದ ಮೇಲೆ ಭ್ರಮರವಾಗುತ ಬಂದು
ಕುಳಿತೊಮ್ಮೆ ಸುಖವಾಗಿ ಮಧುವುಣ್ಣುವೆ-
-ಮತ್ತೆ ಮಣ್ಣಾಗುವೆ.
ಚಣ ಚಣದ ಪರಿಕೆಯಲಿ ನನ್ನಾತ್ಮ ತಳವಳಿಸಿ
ಆ ದಿನವ ನೆನೆ ನೆನೆದು ವ್ಯಾಕುಲಿಸಿದೆ-
-ಮನಸು ಮೊರೆಯಿಡುತಿದೆ.

ಹುಣ್ಣಿಮೆಯ ಆ ರಾತ್ರಿ ಕಡಲ ದಂಡೆಯ ಮೇಲೆ
ಕಳೆದಿರುವ ಯಾಮಿನಿಯ ಮರುಕಳಿಸಿಕೋ-
-ಮತ್ತೆ ಮುಖಮರೆಸಿಕೋ.
ಮರಳು ದಿನ್ನೆಯ ಮೇಲೆ ನೈಸೋಂಕಿನಲಿ ಮಲಗಿ
"ನೀವು ನನಗೇ ಬೇಕು ಎಂದೆನ್ನೆಯಾ-
-ಚಿನ್ನ ನೀ ಮರೆತೆಯಾ?

ಕಳ್ಳನಡು, ಬಳ್ಳಿನಡೆ, ಉದ್ದ ಜಡೆ ಗುಂಗುರುಳು
ಮುದ್ದು ಮುಖವನು ಕಾಣ ಮನಬಯಸಿದೆ-
ಜೀವ ಹೂವಾಗಿದೆ.
ಓ ಎನ್ನ ಮನದರಸಿ ನನ್ನ ಚಿನ್ನದ ಬೊಂಬೆ
ಒಂದುಸಲ ಬಂದೆನ್ನ ಕಣ್ಣೊರಸೆಯಾ?--
-ಇನಿಯನುಡಿಯುಣಿಸೆಯಾ?

ಉರುಟು ಮುಖ, ದುಂಡು ತುಟಿ, ಮುದ್ದಾದ ಮರಿಮೂಗು.
ಒದ್ದೆಯಾದಂಗೈಯನದುಮ ಬಯಸುವೆನು-
-ಅದುರುವಧರ ಬಯಸುವೆನು.
ಸೋನೆ ಸುರಿಸಿದ ನೀನು ಮಂಜು ಮುಸುಕಿದೆಯೇಕೆ
ಭಾವಕಮಲಗಳೆಲ್ಲ ಬಾಡಿ ನಿಂತಿಹವು-
-ನಿನ್ನ ಮೋಡಿಯೆಂತಿಹುದು.

ನಿನ್ನ ನೋಹದ ಮೋಡ ವಿರಹ ತಾಪಕೆ ಕರಗಿ
ಕಣ್ಣೀರ ಹನಿಯಾಗಿ ಹೊರಹೊಮ್ಮಿದೆ-
-ಕೆನ್ನೆ ಕಡಲಾಗಿದೆ.
ನಮ್ಮಗೆಳೆತನ ಮೊದಲು ಆರಂಭವಾದಾಗ
ಏನು ಸಂತಸವಿದ್ದೆ ಓ ಚೆನ್ನೆ ನೀ-
-ಬಹಳ ಕೆಟ್ಟವಳೆ ನೀ?

ಸಿನ್ನ ಛವಿ ಕಂಡಾಗ ಕವಿ ಹೃದಯ ಹೂವಾಗಿ
ಸಿನ್ನ ರಾಗವ ಹಾಡಿ ನಲಿದಾಡಿತು-
-ಮೆದುಳು ಮರುಳಾಯಿತು.
ಯೌವನದ ಸಾರವನು ಹೀರಿ ಹಿಪ್ಪೆಯ ಮಾಡಿ
ಹಾಳುದುಂಬಿಯ ಹಾಗೆ ಮರೆಯಾದೆಯಾ-
-ಮತ್ತೆ ಮುಖತೋರೆಯಾ?

•

ಆಹ! ಏನಿನಿಮಾತು! ಜೇನು ಸಕ್ಕರೆಯಂತೆ
ರಾಜ ಋಷಿಯನು ಸುಲಿದ ಓ ಅಪ್ಸರೆ-
ನೀನು ಬಲು ನಿಷ್ಠುರೆ!
ತನು ಮನಸು ಮಾನಗಳು ಮಲಿನವಾದುವು ಪೂರ
ಇದು ಎಲ್ಲ ನಿನಗಾಗಿ ನೆನಪಿಟ್ಟುಕೊ-
-ಸೆರಗು ಗಂಟಿಕ್ಕಿಕೊ

ನಿನ್ನ ರೂಪವೆ ವಸ್ತು ನಿನ್ನ ವಾಣಿಯೆ ರಾಗ
ತವಹಾವಭಾವಗಳೆರಸವಾದುವು-
-ನನಗೆ ಸವಿಯಾದುವು.
ಸರಸವಿರಸದಲಾಗ ನವರಸದ ಸಲ್ಲಾಪ
ಸ್ವಾರಸ್ಯ ಸ್ವಪ್ನವನು ಕಂಡುಕಳಿದೆ-
-ನಾನು ರಸಿಕನಾದೆ.

ನನ್ನೆದೆಯ ಚಿಂತೆಯಿದು ನಾಲಗೆಗೆ ಗೊತ್ತಿಲ್ಲ
ಈ ಲೇಖನಿಗೆ ಮಾತ್ರ ಗೊತ್ತಿರುವುದು-
-ಎಲ್ಲ ತಿಳಿದಿರುವುದು.
ಮುಖಚಂದ್ರಮನ ನೆನೆದು ಭಾವಸಾಗರ ಉಕ್ಕಿ
ಹುಚ್ಚಾಗಿ ಹಾರಾಡಿ ಹರಿದಾಡಿದೆ-
-ಭಾವದಡಕೇರಿದೆ.

ನರನರವು ಸೇರಾಗಿ ಸುರಮುರಲಿ ಬಿದಿರಾಗಿ
ಹೃದಯ ರಂಧ್ರದಿ ಉಸಿರು ಬಿಸುಸುಯ್ದಿದೆ-
-ನಾದ ಹೊರಹೊಮ್ಮಿದೆ.
ವಿರಹ ರಸಪಾನದಿಂ ರೋಸಿದೀ ಮನವೀಗ
ಕಹಿಯುಂಡ ಕೂಸಿನಂತೆ
ಕಂಡುದನು ಕಂಡಂತೆ ಕೊರೆದ ಈ ಕವಿ ಹೃದಯ
ಕೂಗಿಕತ್ತರಿದರೂ ರೇಗಿಕೊಳದು.

•

ಪ್ರೇಮ ಯಜ್ಞವ ಮಾಡಿ ವಿರಹಸುಖವನು ಪಡೆದೆ
ಕಣ್ಣೀರ ಪ್ರತಿಫಲವು ದೊರೆತಿರುವುದು.
ಜೀವನದ ವೇದಿಯಲಿ ನಡೆದಿರುವುದೀಯಜ್ಞ-
ನನ್ನಾತ್ಮ ಸಾಕ್ಷಿಯಾಗಿ

ವಿರಹದಾಹನೆ ಅಗ್ನಿ ಕಣ್ಣೀರೆ ರಸಘೃತವು
ಬಡ ಜೀವ ಮುಖ್ಯ ಹೋತ್ರಿ.
ಮೂಲಮಂತ್ರವು ಪ್ರೇಮ ನಿಟ್ಟುಸಿರು ಛಂದಸ್ಸು
ಋಷಿ ಇದಕೆ ಯಾರೋ ಕಾಣೆ?

ಕುಲ, ಮಾನ, ಮರ್ಯಾದೆ, ಕರ್ತವ್ಯ ಮುನ್ನೋಟ
ಇವನೆಲ್ಲ ಹೋಮಿಸಿದೆ ಸಮಿಧೆಯಂತೆ.
ಯಜ್ಞದಾರಂಭದಲಿ ಗುರುಗಣಪರನು ನೆನೆದು
ಪ್ರಾರ್ಥನೆಯ ಮಾಡಿಲ್ಲ ನನ್ನ ತಪ್ಪೆ?

ನೇಹಪಥದಲಿ ನಡೆದು ವಿರಹ ತಾಪಕೆ ಬಳಲೆ
ಕಣ್ಣೀರಮೃಷ್ಟಾನ್ನ ಉಣ ಬಡಿಸಿದೆ-
ದಣಿವುದೂರಾಗಿದೆ.
ಜೀವನದ ಪಥದಲ್ಲಿ ನೆನಪಿನೀಕರಿ ರಾತ್ರೆ
ಕಣ್ಣೀರೆಕೈಬೆಳಕು ಮುಂದೆ ಸಾಗಿಹೆನು-
ನಿನ್ನನಗಲಿ ನಡೆಯುವೆನು

ಹೃದಯದೀ ಮರು ಭೂಮಿ ತೃಷಿತ ಜೀವನು ಪಥಿಕ
ಕಣ್ಣೀರ ಕುಡಿಯುತ್ತ ಮುಂದೆ ಸಾಗುವೆನು-
ದೂರ ಪಯಣ ಬೆಳೆಸುವೆನು
ಆಗಾಗ ದಾರಿಯಲಿ ಮಧುಮಾಸ ಬಂದಾಗ
ನಿನ್ನ ನೆನೆಯದೆ ನಾನು ನಡೆವದೆಂತು-
ನೆನೆದರೇನು ಬಂತು?

•

ಅವಳ ನೆನಪು

ಮಂದ ಮಾರುತನಲ್ಲಿ ಕೋಗಿಲೆಯ ದನಿಯಲ್ಲಿ
ನಿನ್ನ ನಡೆನುಡಿಯನ್ನು ಕಂಡಿರುವೆನು–
ನೇಹ ನೆನೆಸಿರುವೆನು.
ನಿನ್ನನ್ನು ನೆನೆದಾಗ ಹೃದಯಾಂತರಾಳದಲಿ
ಒಂದು ತರ ಹೋರಾಟ ನಡೆದಿರುತಿದೆ-
ಬಹಳ ಸಿಹಿಯೆನಿಸಿದೆ.

ರವಿಯ ತಾಪಕೆ ನೀರು ಹವೆಯಾಗಿ ಮೇಲೇರಿ
ಮೋಡವಾಗುತ ತಣಿದು ಕೆಳಗೆ ಸುರಿದಂತೆ–
ವಿರಹ ದೂರಾಗಿದೆ.
ಕಳ್ಳಿನಮಲಿಳಿದಬಳಿಕಾಗುವುದು ಒಂದು ತರ
ಸಂದು ಗಂಟುಗಳಲ್ಲಿ ಕಿರುವೇದನೆ–
ಅಂತೆ ಎದೆಯಾಳದಿ.

ಒಮ್ಮೆ ಒಂದೇ ಒಂದು ಸಲಕಾಗಿ ಬಂದಿಲ್ಲಿ
"ಬಾರಾಜ, ಬಾರಲ್ಲ—ಹೀಗೆ ಬಾರಾ-"
ಎಂದು ಮುಖವ ತೋರಾ
ಜೀವನಿಲ್ಲದ ದೇಹ ರಕ್ತವಿಲ್ಲದನಾಗ
ಸೂರ್ಯನಿಲ್ಲದ ಕಮಲವಾಗಿರುವೆನು–
ಬಹಳ ಸೊರಗಿರುವೆನು.

ರತಿಯನಗಲಿದ ಕಾಮ ಸತಿಯನಗಲಿದ ರಾಮ
ಕಾಂತೆಯನ್ನಗಲಿರುವ ಯಕ್ಷನಂತೆ–
ಬಹಳ ಸೊರಗಿರುವೆನು.
ಹಾಯಾಗಿ ಇದ್ದವನ ಹಾವಭಾವದಿ ಕೆಣಕಿ
ತನುಮನಗಳನು ತುಡುಕಿ ಮರೆಯಾದೆಯಾ–
ಮತ್ತೆ ಮುಖ ತೋರೆಯಾ?

•

ಮನೆಯ ಮಾಡಿನ ಮೇಲೆ ಪಾರಿವಾಳದ ಜೋಡಿ
ಎನ್ನನಣಕಿಪ ತೆರದಿ ಕುಳಿತಿರುವುದು–
ಮನಸು ಮೊರೆಯಿಡುವುದು.
ಹಗಲು ಹಸಿವೆಯು ಕಾಣೆ ರಾತ್ರಿ ನಿದ್ದೆಯು ಮೋಸ
ಪ್ರತಿ ಚಣವು ಯಾವುದೋ ಮಧುರನೆನಪು–
ನಿನ್ನ ಚೆಲುವ ಹೊಂಗನಸು.

ನನ್ನೆದೆಯ ಕಮಲವನು ಮೂಸಿ ಮುತ್ತನಿಟ್ಟು
ಹಿಸು ಹಿಸುಕಿ ಬೀಸಾಡಿ ನಗುತಿರುವೆಯಾ–
ಅಲ್ಲ ಅಳುತಿರುವೆಯಾ?
ಕಳೆದ ದಿನಗಳ ನೆನಪು ಮರುಕಳಿಸಿಬರುತಿರಲು
ನರನಿಮಿರಿ ಮೈ ಬೆವತು ಹುಚ್ಚಾಗುವೆ–
ನಿಂತು ಕಲ್ಲಾಗುವೆ.

ರಕ್ತನಾಳಗುಳುಬ್ಬಿ ಉಸಿರು ಬಿಸಿ ಬಿಸಿಯಾಗಿ
ಮೆದುಳಿಡೀ ಚಟಚಟನೆ ಸಿಡಿಯುತ್ತಿದೆ–
ಯಾಕೊ ಎನಗರಿಯದೆ.
ನೆನಪಿನರಮನೆಯನ್ನು ವಿರಹಾಗ್ನಿ ಹತ್ತಿಕ್ಕಿ
ಉಳಿದಿರುವ 'ಉರಿಮಸಣ'ದಂತಿರುವುದು–
ಮನದ ಮಧುರನೆನಪುಗಳು.

ಒಕ್ಕಲಿಲ್ಲದ ಮಾಡ ನೀರೆ ಇಲ್ಲದ ಬಾವಿ
ದೇವರಿಲ್ಲದ ಗುಡಿಯು ಹಾಗಿರುವುದು–
ನನ್ನ ಹೃತ್ ಪೀಠವು

* * * * *

ಅವಳ ನೆನಪು

ಒಂದು ಹೆಣ್ಣಿಗೆ ನನ್ನ ಸಂಪೂರ್ಣ ಜೀವನವು
ತಿಲತುಳಸಿ ಧಾರೆಯಾಯ್ತೆ?
ಬೆಳಗಿ ತೊಳಗುತ್ತಿದ್ದ ಹೃದಯ ಸಿಂಹಾಸನವು
ಈಗ ಬರಿ ಮಸಣವಾಯ್ತೆ?

ಎದೆಯ ಮಸಣವ ಗುಡಿಸಿ ಪ್ರೇಮದೊರತೆಯ ಹರಿಸಿ
ಹೊಸತಾಗಿ ಜೀವಕಳೆ ಹುರುಪು ತುಂಬಿ
ತಂಪೀವ ಶೃಂಗಾರ ಕುಸುಮಗಳನರಳಿಸುತ
ನನ್ನಂತರಾತ್ಮನಿಗೆ ಅಮೃತವುಣಿಸಿ
ಭಾವದರಮನೆಗೊಂದು ರತ್ನಕಲಶವನಿಡುವ
ಸಿಂಗಾರಿ ಮುಗುದೆಯವಳೆಲ್ಲಿರುವಳೊ?

ಯುಗಪುರುಷ ಪ್ರಕಟನಾಲಯದ
ನಾಲ್ಕನೆ ವರ್ಷದ ಕೃತಿಗಳು

೧.	ಯುಗಪುರುಷ ದಾರಾ ನಾಟಕ	[ಕಮಲನಾಭ]
೨.	ಮೂರುದಾರಿ ಕಾದಂಬರಿ	["ಸಾಧು"]
೩.	ಕಾಣದೆ ಕಟ್ಟಿದ ಗಂಡ ಕಾದಂಬರಿ	["ಸಾಧು"]

ಯುಗಪುರುಷ

(ದ. ಕನ್ನಡ ಜಿಲ್ಲೆಯ ಮೇಲ್ತರಗತಿಯ ಏಕೈಕ ಸಾಹಿತ್ಯಿಕ ಮಾಸಪತ್ರಿಕೆ.)

ವರ್ಷಂಪ್ರತಿ ರೂ. ೫ನ್ನು ತೆತ್ತು ಚಂದಾದಾರರಾಗುವ ನೆರವುಗಾರರಿಗೆ ಯುಗಪುರುಷದ ೧೨ ಸಂಚಿಕೆಗಳನ್ನೂ, ರೂ. ೧ ಬೆಲೆಯ ವಿಶಿಷ್ಟ ರೀತಿಯ ವಿಶೇಷಾಂಕವನ್ನೂ, ರೂ. ೩ ಬೆಲೆಯ ಪ್ರಕಟನೆಗಳನ್ನೂ ಪ್ರತಿ ವರ್ಷ ಪಡೆಯುವ ಸೌಲಭ್ಯ.

ಮೊದಲ ವರ್ಷದ ಕೃತಿಗಳು:

೧.	ಕ್ಷಾತ್ರದರ್ಶನ	[ಅ. ಗೌ. ಕಿ.]	೧–೦–೦
೨.	ಯೋಗಲಹರಿ	[ಅ. ಗೌ. ಕಿ.]	೧–೦–೦
೩.	ಸಮರ್ಪಣೆ	[ಕಮಲನಾಭ]	೧–೦–೦

ಎರಡನೆ ವರ್ಷದ ಕೃತಿಗಳು:-

೧.	ಸುಮ ಸಂಚಯ	[ಕಮಲನಾಭ]	೧–೦–೦
೨.	ಶಿವ ಲೇಶ್ಯೆ	[ಅ ಗೌ. ಕಿ]	೧–೮–೦
೩.	ಬೇವು ಬೆಲ್ಲ	[ಪ. ಸೀ. ಭ.]	೦-೧೨–೦

ಮೂರನೆ ವರ್ಷದ ಕೃತಿಗಳು:-

೧.	ವಂದನಾರ್ಪಣೆ	[ಪು. ಹ. ಆಚಾರ್ಯ]	೧–೦–೦
೨.	ಅವಳ ನೆನಪು	["ರಸಿಕ"]	೦–೮–೦
೩.	ಚಾರು ಚಯನ	[ಕಮಲನಾಭ]	೧–೪–೦

ಯುಗಪುರುಷ ಪ್ರಕಟನಾಲಯ,

ಕಿನ್ನಿಗೋಳಿ, ದ. ಕ.